# ಸರಕಾರಿ ನೌಕರರ ಸಹಕಾರಿ ಬ್ಯಾಂಕ್ ನಿಯಮಿತ, ವಿಜಯಪುರ.

**ನಂ.ಸ ನೌ ಸ ಬ್ಯಾಂ/ಆಡಳಿತ/ಸಿಬ್ಬಂದಿ/ನೇಮಕಾತಿ/2951/2026–27** **ದಿನಾಂಕ: 05–09–2026**

## –:ನೇಮಕಾತಿ ಅಧಿಸೂಚನೆ :–

ಮಾನ್ಯ ನಿಬಂಧಕರು, ಸಹಕಾರ ಸಂಘಗಳು, ಬೆಂಗಳೂರು ಇವರ ಆದೇಶ ಸಂಖ್ಯೆ **ಆರ್‌ಸಿಎಸ್/ಯುಬಿಸಿ–7/16/ಯುಸಿಎಸ್/2026–27** ದಿನಾಂಕ **24/08/2026** ರಡಿಯಲ್ಲಿ ಹೊರಡಿಸಿದ ಆದೇಶದ ಮೇರೆಗೆ ಸರಕಾರಿ ನೌಕರರ ಸಹಕಾರಿ ಬ್ಯಾಂಕ್ ನಿಯಮಿತ, ವಿಜಯಪುರ. ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛೇವುಳ್ಳ ಅಭ್ಯರ್ಥಿಗಳು ಅನ್‌ಲೈನ್ ಮುಖಾಂತರ ದಿನಾಂಕ **08/09/2026** ರಿಂದ ದಿನಾಂಕ **28/09/2026** ರವರೆಗೆ ಸಾಯಂಕಾಲ **5–30**ಘಂಟೆ ಒಳಗಾಗಿ ಆನ್‌ಲೈನ್‌ನ ಮುಖಾಂತರ ಮಾತ್ರ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುತ್ತದೆ.

Website Link : **https://snsbankvijayapur.com/** ಇದರಲ್ಲಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ನೇಮಕಾತಿ ಮಾಡಲು ಉದ್ದೇಶಿಸಿದ ವಿವಿಧ ಹುದ್ದೆಗಳನ್ನು ಸರಕಾರದ ಆದೇಶದ ಪ್ರಕಾರ ಈ ಕೆಳಕಂಡಂತೆ ವರ್ಗಿಕರಿಸಿ ಮೀಸಲಿರಿಸಲಾಗಿದೆ.

**01 ಹುದ್ದೆಗಳ ವಿವಿರ & ವೇತನ ಶ್ರೇಣಿ ರೂ :–**

| ಅ.ನಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ವೇತನ ಶ್ರೇಣಿ |
|---|---|---|---|
| 01. | ಕಿರಿಯ ಸಹಾಯಕರು | 12 | 44425-1125-47800-1250-52800-1375-58300-1500-64300-1650-74200-1900-83700 |
| 02 | ಸಿಪಾಯಿ/ಕಾವಲುಗಾರ | 6 | 27000-650-29600-725-32500-800-35700-900-39300-1000-43300-1125-46675 |

**ಸೂಚನೆ : ರಾಜ್ಯ ಸರಕಾರವು ತನ್ನ ನೌಕರರಿಗೆ ಕಾಲಕಾಲಕ್ಕೆ ಮಂಜೂರು ಮಾಡುವ ತುಟ್ಟಿ ಭತ್ಯೆ ಹಾಗೂ ಇತರ ಭತ್ಯೆಗಳನ್ನು ನೀಡಲಾಗುವದು.**

**02 ಶೈಕ್ಷಣಿಕ ವಿದ್ಯಾರ್ಹತೆ : ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಆಯಾ ಹುದ್ದೆಗಳ ಮುಂದೆ ಈ ಕೆಳಗಿನಂತೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಹೊಂದಿರಲೇಬೇಕು. ಕನ್ನಡ ಓದಲು ಮತ್ತು ಬರೆಯಲು ಕಡ್ಡಾಯವಾಗಿ ತಿಳಿದಿರಬೇಕು.**

| ಅ.ನಂ | ಹುದ್ದೆಯ ಹೆಸರು | ವಿದ್ಯಾರ್ಹತೆ |
|---|---|---|
| ಅ. | ಕಿರಿಯ ಸಹಾಯಕರು | 1. ಭಾರತದ ಕಾನೂನಿನ ಸ್ಥಾಪನೆಯಾದ ವಿಶ್ವವಿದ್ಯಾನಿಲಯದ ಯಾವುದೇ ಪದವಿಯಲ್ಲಿ, ಸರಾಸರಿ ಕನಿಷ್ಠ 60% ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು.<br>2. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆಗೆ ಕನ್ನಡದ ಜ್ಞಾನ, ಬರೆಯುವಿಕೆ ಮತ್ತು ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.<br>3. ಕಂಪ್ಯೂಟರ ಆಪರೇಷನ್ಸ ಮತ್ತು ಅಪ್ಲಿಕೇಷನ್ಸನಲ್ಲಿ ಜ್ಞಾನ ಹೊಂದಿರಬೇಕು. |
| ಬ. | ಸಿಪಾಯಿ/ಕಾವಲುಗಾರ | 1. ಎಸ್.ಎಸ್.ಎಲ್.ಸಿ ಯಲ್ಲಿ ಸರಾಸರಿ ಕನಿಷ್ಠ 50% ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು. ಕನ್ನಡವನ್ನು ಒಂದು ಬಾಷೆಯಾಗಿ ಓದಿರಬೇಕು. |

**03. ವಯೋಮಿತಿ :** ಅಭ್ಯರ್ಥಿಗೆ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ರಾಜ್ಯ ಸರಕಾರದ ರೀತ್ಯಾ ಈ ಕೆಳಕಂಡ ಗರಿಷ್ಟ ವಯೋಮಿತಿಗೊಳಪಟ್ಟಿರಬೇಕು.

| ವರ್ಗೀಕರಣದ ವಿವರ | ಕನಿಷ್ಠ | ಗರಿಷ್ಠ |
|---|---|---|
| ಸಾಮಾನ್ಯ ವರ್ಗ | 18 | 35 |
| ಪ್ರವರ್ಗ–2(ಎ), 2(ಬಿ) , 3(ಬಿ) | 18 | 38 |
| ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಅಥವಾ ಇತರೆ ಹಿಂದುಳಿದ ವರ್ಗಗಳ ವರ್ಗ –1ಕ್ಕೆ ಸೇರಿರುವ ವ್ಯಕ್ತಿಗಳಾಗಿದ್ದಲ್ಲಿ | 18 | 40 |

**ವಿಶೇಷ ಸೂಚನೆ : ಕರ್ನಾಟಕ ಸರಕಾರ ಆದೇಶ ಸಂಖ್ಯೆ : ಸಿಆಸುಇ262ಸೇನೆನಿ2025 ಬೆಂಗಳೂರು ದಿನಾಂಕ : 29–01–2026 ರಂತೆ ಗರಿಷ್ಠ ವಯೋಮಿತಿಗೆ ಹೆಚ್ಚುವರಿ ಐದು ವರ್ಷಗಳ ಸಡಿಲಿಕೆ ನೀಡಲಾಗಿದೆ.**

**04. ಅರ್ಜಿ ಶುಲ್ಕ :**

| |
|---|
| ಕಿರಿಯ ಸಹಾಯಕರು ಹುದ್ದೆಗೆ ಸಾಮಾನ್ಯ ಮತ್ತು ಇತರೆ ಅಭ್ಯರ್ಥಿಗಳು ಪಾವತಿಸಬೇಕಾದ ಅರ್ಜಿ ಶುಲ್ಕ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ರೂ. 1200/– ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ರೂ.600/– |

| |
|---|
| ಸಿಪಾಯಿ / ಕಾವಲುಗಾರ ಹುದ್ದೆಗೆ ಸಾಮಾನ್ಯ ಮತ್ತು ಇತರೆ ಅಭ್ಯರ್ಥಿಗಳು ಪಾವತಿಸಬೇಕಾದ ಅರ್ಜಿ ಶುಲ್ಕ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ರೂ. 600/– ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ರೂ.400/– |

**05. ಅರ್ಜಿ ಸಲ್ಲಿಸುವ ವಿಧಾನ :**

ಎ. ಬ್ಯಾಂಕಿನ ವೆಬ್‌ಸೈಟ್ ಮೂಲಕ ಪ್ರಚುರಪಡಿಸಿದ ಲಿಂಕ್‌ನಲ್ಲಿ ಮಾತ್ರ Online ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು.

ಬಿ. ಅರ್ಜಿಗಳನ್ನು ಸಲ್ಲಿಸುವಾಗ ಆಯಾ ಹುದ್ದೆಗಳ ಅರ್ಜಿಗಳನ್ನು ಆಯ್ಕೆ ಮಾಡಿ ಅರ್ಜಿ ಸಲ್ಲಿಸತಕ್ಕದ್ದು.

ಸಿ. ಅರ್ಜಿಗಳನ್ನು Online : https://snsbankvijayapur.com/ನಲ್ಲಿ ದಿ: 08/09/2026 ರಿಂದ 28/09/2026 ರವರೆಗೆ ಸಾಯಂಕಾಲ 5–30 ಘಂಟೆವರೆಗೆ ಅವಕಾಶವಿರುವುದು.

ಡಿ. ಅರ್ಜಿಯಲ್ಲಿರುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿರಬೇಕು.

ಇ. ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರಿಜ್ಞಾನ ಕಡ್ಡಾಯವಾಗಿರುತ್ತದೆ.

**06. ಆಯ್ಕೆ ವಿಧಾನ :**

**ಅ. ಕಿರಿಯ ಸಹಾಯಕರು:**

1. ಕಿರಿಯ ಸಹಾಯಕರ ಖಾಲಿ ಹುದ್ದೆಗಳನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನ ಮೂಲಕ ಈ ಕೆಳಗಿನಂತೆ ಆಯ್ಕೆ ಮಾಡಲಾಗುವುದು.
2. ಕಿರಿಯ ಸಹಾಯಕರ ನೇರ ನೇಮಕಾತಿಗೆ ಸಂಬಂದಿಸಿದ ಬಾಹ್ಯ ಮೂಲಗಳ ನಡೆಸುವ ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ ಅದನ್ನು ಆಧರಿಸಿ ಅಭ್ಯರ್ಥಿಗಳನ್ನು **1 : 5** ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ನಿಗದಿಪಡಿಸಿದ ಅಂಕಗಳು 15.
3. ಕಿರಿಯ ಸಹಾಯಕರ ನೇರ ನೇಮಕಾತಿಗೆ ಸಂಬಂದಿಸಿದಂತೆ ಲಿಖಿತ ಪರೀಕ್ಷೇಯಲ್ಲಿ ಪಡೆದ ಅಂಕಗಳನ್ನು ಶೇಕಡಾ 85 ಕ್ಕೆ ಲೆಕ್ಕಮಾಡಿ ಪ್ರಾಪ್ತವಾಗುವ ಅಂಕಗಳ ಶೇಕಡಾವಾರು ಪ್ರಮಾಣದ ಜೊತೆಗೆ ಸಂದರ್ಶನದಲ್ಲಿ ಗಳಿಸುವ ಅಂಕಗಳನ್ನು ಕೂಡಿಸಿ ಅಂತಿಮ ಅರ್ಹತಾ ಪಟ್ಟಿಯನ್ನು ತಯಾರಿಸಿ, ನಿಯಮಗಳನ್ನು ಅನುಸರಿಸಿ ಆಯ್ಕೆಪಟ್ಟಿಯನ್ನು ಸಿದ್ದಪಡಿಸಿ ನೇಮಕಾತಿ ಮಾಡಿಕೊಳ್ಳಲಾಗುವುದು.

4. ಕಿರಿಯ ಸಹಾಯಕರ ಹುದ್ದೆಗೆ ನಡೆಸುವ ಲಿಖಿತ ಪರೀಕ್ಷೆಯು ಈ ಕೆಳಗಿನ ವಿಷಯಗಳನ್ನೊಳಗೊಂಡ 100 ಅಂಕಗಳ ಹೊಂದಿರುವ ಎರಡು ಪ್ರಶ್ನೆ ಪತ್ರಿಕೆಗಳನ್ನು ಹೊಂದಿರುತ್ತದೆ.

| | | |
|---|---|---|
| **ಪ್ರಥಮ ಪತ್ರಿಕೆ** | 1. ಕನ್ನಡ ಭಾಷೆ | 50 ಅಂಕಗಳು |
| | 2. ಸಾಮಾನ್ಯ ಇಂಗ್ಲೀಷ ಭಾಷೆ | 25 ಅಂಕಗಳು |
| | 3. ಸಾಮಾನ್ಯ ಜ್ಞಾನ | 25 ಅಂಕಗಳು |
| | **ಒಟ್ಟು** | **100 ಅಂಕಗಳು** |
| **ದ್ವಿತೀಯ ಪತ್ರಿಕೆ** | 1. ಸಹಕಾರ ರಂಗಕ್ಕೆ ಸಂಬಂದಿಸಿದ ವಿಷಯ | 50 ಅಂಕಗಳು |
| | 2. ಭಾರತದ ಸಂವಿಧಾನಕ್ಕೆ ಸಂಬಂಧಿಸಿದ ವಿಷಯ | 25 ಅಂಕಗಳು |
| | 3. ಸಹಕಾರಿ ಬ್ಯಾಂಕ/ ಉದ್ದೇಶ/ಕಾರ್ಯ ಚಟುವಟಿಕೆ ಬಗ್ಗೆ | 25 ಅಂಕಗಳು |
| | **ಒಟ್ಟು** | **100 ಅಂಕಗಳು** |

**ಬ) ಸಿಪಾಯಿ/ಕಾವಲುಗಾರ ಆಯ್ಕೆ ವಿಧಾನ :** ಗ್ರೂಪ ಡಿ ಸೇವೆಗಳ ಹುದ್ದೆಗಳಿಗೆ ನೇಮಕಾತಿಗಾಗಿ ಈ ಹುದ್ದೆಗಳಿಗಾಗಿ ನಿರ್ದಿಷ್ಠ ಪಡಿಸಲಾದ ಅರ್ಹತೆಯುಳ್ಳ ಲಿಖಿತ ಪರೀಕ್ಷೆಯಲ್ಲಿ ಪಡೆದುಕೊಂಡ ಪ್ರತಿಶತಃ ಅಂಕಗಳ ಆಧಾರದ ಮೇಲೆ **1 : 5** ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಪರೀಕ್ಷೆಯಲ್ಲಿ ಅರ್ಹತೆಯುಳ್ಳ ಪಡೆಯಲಾದ ಅಂಕಗಳನ್ನು ಶೇಕಡಾ 85% ಕ್ಕೆ ಇಳಿಸಿ ಉಳಿದ ಪ್ರತಿಶತಃ 15 ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು.

07. **ಅರ್ಜಿ ಸಲ್ಲಿಸುವ ವಿಧಾನ**

ಅಭ್ಯರ್ಥಿಗಳು ಈ ಕೆಳಗಿನ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ Online ನಲ್ಲಿ ಅರ್ಜಿಯೊಂದಿಗೆ ಅಪಲೋಡ್ ಮಾಡತಕ್ಕದ್ದು.

1. ಪಾಸ್‌ಪೋರ್ಟ ಅಳತೆಯ ಭಾವಚಿತ್ರ
2. ವಯಸ್ಸು ದೃಡೀಕರಣ ಕುರಿತು ಎಸ್.ಎಸ್.ಎಲ್.ಸಿ ಅಂಕಪಟ್ಟಿ / ವರ್ಗಾವಣೆ ಪ್ರಮಾಣ ಪತ್ರ.
3. ವಿದ್ಯಾರ್ಹತೆ ಕುರಿತು ಪ್ರಮಾಣ ಪತ್ರ
4. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮತ್ತು ಪ್ರವರ್ಗ–1, ಹಿಂದುಳಿದ ವರ್ಗದ ಹಾಗೂ ಇನ್ನಿತರ ಮೀಸಲಾತಿ ಸೌಲಭ್ಯ ಪಡೆಯಲಿಚ್ಚಿಸುವ ಅಭ್ಯರ್ಥಿಗಳು ಸರಕಾರದ ನಿಗದಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದವರಿಂದ ದೃಡಿಕರಣ ಪಡೆದ ಪ್ರಮಾಣ ಪತ್ರ
5. ಪ್ರವರ್ಗ 2ಎ ಹಾಗೂ 2ಬಿ ಅಭ್ಯರ್ಥಿಗಳು ನಮೂನೆ ಎಫ್ ನಲ್ಲಿ ಸಂಬಂಧಿಸಿದ ತಹಶೀಲ್ದಾರ ರವರಿಂದ ಇತ್ತೀಚಿನ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. ಹಾಗೂ ಸದರಿ ಪ್ರಮಾಣಪತ್ರದ ಮೂಲ ಪ್ರತಿಯನ್ನು ದಾಖಲೆಗಳ ಪರಿಶೀಲನೆಯ ಸಂದರ್ಭದಲ್ಲಿ ಬ್ಯಾಂಕಿಗೆ ಸಲ್ಲಿಸಿ ಪರಿಶೀಲನೆಗೆ ಒಳಪಡಿಸತಕ್ಕದ್ದು.

08. **ಇತರೆ ನಿಯಮಗಳು :**

**1.** ಪೂರ್ಣ ವಿವಿರಗಳನ್ನು ಹೊಂದದೆ ಇರುವ ಹಾಗೂ ಅವಶ್ಯ ದಾಖಲಾತಿಗಳನ್ನು ಅಪ್‌ಲೋಡ್ ಮಾಡದೇ ಇರುವ ಹಾಗೂ ಅವಧಿ ಮೀರಿ ಅಪ್‌ಲೋಡ್ ಮತ್ತು ಟಪಾಲ್ ಮೂಲಕ ಬ್ಯಾಂಕಿಗೆ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಲಾಗುವುದು.

**2.** ಅಭ್ಯರ್ಥಿಗಳ ಆಯ್ಕೆ, ಅರ್ಜಿ ಸ್ವಿಕರಿಸುವ, ಮತ್ತು ನಿರಾಕರಿಸುವ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.

**3.** ನೇಮಕಾತಿಯನ್ನು ಯಾವುದೇ ಕಾರಣ ನೀಡದೇ ಮೂಂದುಡುವ, ರದ್ದುಪಡಿಸುವ, ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.

4. ಯಾವುದೇ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಕರೆ ಬಂದಿಲ್ಲವಾದರೆ ಸಂದರ್ಶನಕ್ಕೆ ಅರ್ಹತೆ ಹೊಂದಿಲ್ಲವೆಂದು ತಿಳಿಯಬೇಕು.
5. ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷದ ಅವಧಿಯ ಪರೀಕ್ಷಾರ್ಹ ಸೇವೆಯಲ್ಲಿ(Probationary Period) ಇರಬೇಕಾಗುವುದು. ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕಿನಿಂದ ಸೂಚಿಸಲ್ಪಟ್ಟಂತೆ ಭದ್ರತೆ ನೀಡಬೇಕು.
6. ನೇಮಕಾತಿಗೆ ಸಂಭಂದಿಸಿದಂತೆ ಬ್ಯಾಂಕಿನೊಂದಿಗೆ ಯಾವುದೇ ರೀತಿಯ ಪತ್ರ ವ್ಯವಹಾರ ಮಾಡಲು ಆಸ್ಪದ ವಿರುವುದಿಲ್ಲ.
7. ಅರ್ಜಿಗಳನ್ನು ಅಂಚೆ/ಕೋರಿಯರ್/ಇ–ಮೇಲ್/ಖುದ್ದಾಗಿ/ಇತ್ಯಾದಿಗಳ ಮುಖಾಂತರ ಸಲ್ಲಿಸಲು ಅವಕಾಶವಿರುವುದಿಲ್ಲ. Online ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು.

**ವಿಶೇಷ ಸೂಚನೆ:** ಸಿಬ್ಬಂದಿ ನೇಮಕಾತಿ ಕುರಿತು ದಿನಾಂಕ 08/09/2026 ರ ವಿಜಯವಾಣಿ/ಇಂಡಿಯನ್ ಎಕ್ಸಪ್ರೇಸ್ ದಿನಪತ್ರಿಕೆಯಲ್ಲಿ ಬ್ಯಾಂಕಿನ ಸಂಖ್ಯೆ ಸ ನೌ ಸ ಬ್ಯಾಂ/ಆಡಳಿತ/ ಸಿಬ್ಬಂದಿ/ ನೇಮಕಾತಿ/2951/ 2026–27 ಪ್ರಕಟಣೆ ಪ್ರಕಾರ ಅರ್ಜಿ ಸಲ್ಲಿಸತಕ್ಕದ್ದು.

ಸಹಿ/–
ನೇಮಕಾತಿ ಸಂಚಾಲಕರು ಹಾಗೂ
ಪ್ರಧಾನ ವ್ಯವಸ್ಥಾಪಕರು
ಸರಕಾರಿ ನೌಕರರ ಸಹಕಾರಿ ಬ್ಯಾಂಕ ನಿ., ವಿಜಯಪುರ

ದಿನಾಂಕ:05/09/2026

# BongJobs News







## 🚀 Why Join BongJobs?

**⚡ Instant Alerts**

Get notified the moment a new Sarkari job or result is posted.

**💰 100% Free**

No charges, no spam — just genuine updates & admit card info.

**🔍 Trusted Source**

Verified Sarkari job news, answer keys & results you can rely on.

" Don't miss your next Sarkari Nauki! "

BongJobs · fastest updates